ಕಾಲೇಜು ಆರಂಭವಾಯಿತು ಮತ್ತು 1994 ರಲ್ಲಿ ಇದಕ್ಕೆ ಆಡಳಿತಾತ್ಮಕ ಮಂಜೂರಾತಿ ದೊರಕಿ ಶಂಕುಸ್ಥಾಪನೆಯನ್ನೂ ಕೂಡ ಹಾಕಲಾಯಿತು. ಆದರೆ ಈ ವರ್ಷ ಇದಕ್ಕೆ ಹಣ ಒದಗಿಸಿದ್ದಾರೆ, ಕೆಲಸ ಪ್ರಾರಂಭವಾಗಿದೆ. ಸಿಮೆಂಟ್ ಮತ್ತು ಸ್ಟೀಲ್ ಕೊಡದಿರುವುದರಿಂದ ಕೆಲಸ ನಿಂತಿದೆ. ಇವರು 5 ಲಕ್ಷ ರೂ. ಖರ್ಚು ಮಾಡಿದ್ದಾರೆಂದು ಹೇಳಿದ್ದಾರೆ, 5 ಲಕ್ಷ ರೂ.ನಲ್ಲಿ ಒಂದು ನಯಾ ಪೈಸೆಯೂ ಕೂಡ ಖರ್ಚಾಗಿಲ್ಲ. ಆದಕ್ಕೆ ಆಯವ್ಯಯ ಸಿಕ್ಕಿಲ್ಲ, ಸಿಮೆಂಟ್ ಕೊಡಬೇಕೆಂದು ಕೇಳಿದರೆ ಸಿಮೆಂಟನ್ನು ಕೂಡ ಕೊಡುತ್ತಿಲ್ಲ, ಸ್ಟೀಲ್ ಕೊಡಬೇಕೆಂದು ಕೇಳಿದರೆ ಅದನ್ನೂ ಕೂಡ ಕೊಡುತ್ತಿಲ್ಲ. ಅಧ್ಯಕ್ಷರ ಮುಖೇನ ಮಾನ್ಯ ಸಚಿವರಲ್ಲಿ ನಾನು ಕಳಕಳಿಯಿಂದ ಕೇಳುವುದೇನೆಂದರೆ, ನಾಳೆಯೇ ಸಿಮೆಂಟ್ ಹಾಗೂ ಸ್ಟೀಲ್ ಒದಗಿಸಿ ಕೆಲಸ ಪ್ರಾರಂಭವಾಗಿ ಕನಿಷ್ಟಪಕ್ಷ ಈ ವಷರ ಐದಾರು ತರಗತಿಗಳ ಕೊಠಡಿಗಳನ್ನಾದರೂ ಪೂರ್ಣಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಮಾನ್ಯ ಅಧ್ಯಕ್ಷರು, 12 ಲಕ್ಷ ರೂ. ಎಸ್ಟಿಮೇಟ್ ಕಾಸ್ಟ್ ಆಗಿ, ಆಡಳಿತಾತ್ಮಕವಾದ ಮಂಜೂರಾತಿ ದೊರೆತಿರತಕ್ಕಂಥದ್ದು ಕಳೆದ ವರ್ಷ ಇದಕ್ಕೆ 5 ಲಕ್ಷ ರೂ. ಆಯವ್ಯಯವನ್ನು ಒದಗಿಸಲಾಗಿತ್ತು, ಇದು ಖರ್ಚಾಗಿದೆ ಎಂದು ಲೋಕೋಪಯೋಗಿ ಇಲಾಖೆಯಿಂದ ಬಂದಿದೆ. ಬಹುಶಃ ಅವರು ಸಿಮೆಂಟ್ ಹಾಗೂ ಸ್ಟೀಲ್ ಖರೀದಿ ಮಾಡಿ ಇಟ್ಟುಕೊಂಡು, ಕೆಲಸ ಪ್ರಾರಂಭ ಮಾಡಬಹುದು. ಏನೇ ಆದರೂ ನಾಳೆ ಅವರನ್ನು ಸಭೆಗೆ ಕರೆಯಿಸುತ್ತಿದ್ದೇನೆ. ಈ ಎಲ್ಲಾ ವಿಷಯಗಳನ್ನು ಕೂಲಂಕಷವಾಗಿ ವಿಚಾರಣೆ ಮಾಡಿ ಎಲ್ಲೆಲ್ಲಿ ಕಾಲೇಜುಗಳಲ್ಲಿ ಸ್ಟಿಲ್‌ಓವರ್ ವರ್ಕ್ಸ್ ಇದ್ದಾವೆ ಮೊದಲು ಅದಕ್ಕೆ ಪ್ರಾತಿನಿಧ್ಯ ಕೊಟ್ಟು ಕೆಲಸ ಆರಂಭ ಮಾಡುವುದಕ್ಕೆ ಹೇಳುತ್ತೇನೆ.

ವಿಷಯ: ಜಿಲ್ಲಾ ಪಂಚಾಯತ್ ಸದಸ್ಯರಿಗೆ ಮಾಸಿಕ ಗೌರವಧನ.

229 (1696)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್): ಮಾನ್ಯ ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪಂಚಾಯತಿ ಸದಸ್ಯರಿಗೆ ಮಾಸಿಕ ವೇತನ ನಿಗಧಿಪಡಿಸಲಾಗಿದೆಯೇ?

ಆ) ವೇತನವನ್ನು ನಿಗಧಿಪಡಿಸಿದ್ದರೆ, ಯಾವ ದಿನಾಂಕದಂದು ಜಾರಿಗೊಳಿಸಲಾಗಿದೆ?

ಇ) ಜಿಲ್ಲಾ ಪಂಚಾಯತ್ ಸದಸ್ಯರು 1995 ಮೇ ತಿಂಗಳಿಂದ ಮಾಸಿಕ ಗೌರವಧನ ಪಡೆಯದ ಬಗ್ಗೆ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಜಿಲ್ಲಾ ಪಂಚಾಯತ್ ಸದಸ್ಯರಿಗೆ ಮಾಸಿಕ ಗೌರವಧನ ನೀಡುವ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಪರಿಶೀಲನೆಯಲ್ಲಿದೆ.

ಶ್ರೀ ಕುಂಬ್ಳೆ ಸುಂದರರಾವ್: ಸನ್ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದಂಥ ವಿಷಯ. ಉಪ ಪ್ರಶ್ನೆ ಕೇಳುವುದಕ್ಕೆ ಮೊದಲು ನಾನು ಒಂದೆರಡು ಮಾತುಗಳನ್ನು ಹೇಳಿದರೆ, ನಾನು ಭಾಷಣ ಮಾಡುತ್ತೇನೆಂದು ತಪ್ಪಾಗಿ ತಿಳಿಯಬಾರದು. ತಮ್ಮ ಅನುಮತಿ ಕೋರಿ ಎರಡು ಮಾತುಗಳನ್ನು ಹೇಳುತ್ತಿದ್ದೇನೆ. ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳ ಸದಸ್ಯರುಗಳೂ ನಮ್ಮ ಹಾಗೆಯೇ ಜನ ಪ್ರತಿನಿಧಿಗಳು. ನಾವು ಲೋಕಸಭೆಯಲ್ಲಿ ವೇತನ ಹೆಚ್ಚಿಸಿಕೊಂಡೆವು, ವಿಧಾನಸಭೆಯಲ್ಲಿ ವೇತನ ಹೆಚ್ಚಿಸಿಕೊಂಡೆವು. ಆದರೆ ಜಿಲ್ಲಾ ಪಂಚಾಯಿತಿಯ ಸದಸ್ಯರಿಗೆ ಕೊಡಬೇಕಾದ ಗೌರವಧನ ಅಥವಾ ವೇತನದ ಬಗ್ಗೆ ಇನ್ನೂ ನಾವು ನಿಶ್ಚಿತವಾದಂಥ ಯಾವುದೇ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಇವರಿಗೆ ಮಾಸಿಕ ವೇತನ ನಿಗದಿಪಡಿಸಲಾಗಿದೆಯೆ ಎಂದರೆ ಇಲ್ಲ ಎನ್ನುವ ಉತ್ತರ ಬಂದಿದೆ. ನಿಗದಿಪಡಿಸಿದ್ದರೆ, ಯಾವ ದಿನಾಂಕದಿಂದ ಜಾರಿಗೊಳಿಸಲಾಗಿದೆ ಎಂದು ಕೇಳಿದರೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಸದಸ್ಯರು 1-5-95ರಿಂದ ಗೌರವಧನ ಪಡೆಯದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ನಮ್ಮ ಇವತ್ತಿನ ಜಿಲ್ಲಾ ಪಂಚಾಯಿತಿಯ ವ್ಯವಸ್ಥೆಯಲ್ಲಿ ಆಯ್ಕೆಯಾಗಿರುವ ಈ ಜನ ಪ್ರತಿನಿಧಿಗಳು ಬಡವರು, ಹಿಂದುಳಿದ ವರ್ಗದವರು ಮತ್ತು ಊಟಕ್ಕೆ ಗತಿ ಇಲ್ಲದವರಾಗಿದ್ದಾರೆ. ಅವರು ತಮ್ಮ ಕ್ಷೇತ್ರದಲ್ಲಿ ತಿರುಗಾಡಬೇಕಾದರೆ ಅವರಿಗೆ ದುಡ್ಡು ಬೇಕೋ, ಬೇಡವೋ? 'ಅಕ್ಕಿ ಕೊಟ್ಟು ಅಕ್ಕನ ಮನೆಯಲ್ಲಿ ಊಟ ಮಾಡು' ಎಂದು ಒಂದು ಗಾದೆ ಇದೆ. ಅವರಿಗೆ ಖರ್ಚಿನ ಹಣವನ್ನಾದರೂ ಕೊಡದೇ ಹೋದರೆ ಅವರು ಏನು ಜನ ಸೇವೆ ಮಾಡಲು ಸಾಧ್ಯ? ಒಂದು ಸಲ ನಮ್ಮ ಸಚಿವರು 1-10-97ರಿಂದ ಕೊಡುವುದಾಗಿ ಹೇಳಿದ ನೆನಪು ಇದೆ. ಇದನ್ನು ಮೇಲ್ಮನೆಯಲ್ಲಿ ಹೇಳಿದ್ದಿರಿ ಎಂದು ನಾನು ಗ್ರಹಿಸುತ್ತೇನೆ. ಎರಡನೇ ಸಲ ಸಂಚಯಿತ ನಿಧಿಯಿಂದ ಕೊಡುವುದಾಗಿ ಹೇಳಿದ್ದರು. ಅಕ್ಟೋಬರ್ ಆಖೈರಿನೊಳಗೆ ಕೊಟ್ಟು ಮುಗಿಸುತ್ತೇನೆ ಎಂದು ಹೇಳಿದ್ದರು.

ಅದೂ ಆಗಲಿಲ್ಲ. ಇವರು ಕೋಲಾರಕ್ಕೆ ಹೋದಾಗ, ಜಿಲ್ಲಾ ಪಂಚಾಯಿತಿಯವರಿಗೆ ಕೊಡುತ್ತಿರುವಂಥ 500 ರೂಪಾಯಿಗಳ ಗೌರವಧನವನ್ನು ಒಂದು ಸಾವಿರ ರೂಪಾಯಿಗೆ ಏರಿಸುವುದಾಗಿ ವಾಗ್ದಾನ ಮಾಡಿದ್ದನ್ನು ಓದಿದ ನೆನಪು ಇದೆ. ನಾನು ನಿಮ್ಮನ್ನು ಕೇಳುತ್ತೇನೆ, ಈ ಬಗ್ಗೆ ಇಷ್ಟೆಲ್ಲಾ ಹೇಳಿಕೆಗಳಿದ್ದು, ಅವರ ಕಷ್ಟ ಸಹಜವಾಗಿ ಸತ್ಯವಾಗಿದ್ದು, ಅವರ ಬಗ್ಗೆ ಒಂದು ಖಚಿತವಾದ ತೀರ್ಮಾನವನ್ನು ನೀವು ಏಕೆ ಮಾಡಬಾರದು ಮತ್ತು ಅವರಿಗೆ ಏಕೆ ಗೌರವಧನವನ್ನು ಕೊಡಬಾರದು?

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಬಹಳ ತಾಂತ್ರಿಕವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಪರಿಶೀಲಿಸುತ್ತೇವೆ, ಇಲ್ಲ, ಉದ್ಭವಿಸುವುದಿಲ್ಲ ಎನ್ನುವ ಉತ್ತರಗಳನ್ನು ಪ್ರಶ್ನೆಗೆ ಅನುಗುಣವಾದ ರೀತಿಯಲ್ಲಿ ಕೊಟ್ಟಿದ್ದಾರೆ. ಆದರೆ ಸರ್ಕಾರದವರು ಈಗಾಗಲೇ ಜಿಲ್ಲಾ ಪಂಚಾಯಿತಿಯ ಸದಸ್ಯರಿಗೆ ಮಾಸಿಕವಾಗಿ ಒಂದು ಸಾವಿರ ರೂಪಾಯಿಗಳನ್ನು ಮತ್ತು ತಾಲ್ಲೂಕು ಪಂಚಾಯಿತಿಯ ಸದಸ್ಯರಿಗೆ 500 ರೂಪಾಯಿಗಳನ್ನು ಕೊಡಬೇಕು ಎಂದು ನಿರ್ಧಾರ ಮಾಡಿದ್ದೇವೆ. ಇದರ ಬಗ್ಗೆ ಸಂಚಿತ ಹಣದಿಂದ ದುಡ್ಡು ಕೊಡುತ್ತೇವೆ ಎಂದು ನಾವು ಹಣಕಾಸಿನ ಇಲಾಖೆಗೆ ಕಳುಹಿಸಿ ಕೊಟ್ಟಾಗ ಹಣಕಾಸಿನ ಇಲಾಖೆಯವರು 1-10-97ರಿಂದ ಕೊಡಲು ಒಪ್ಪಲಿಲ್ಲ. ಈಗ 1-4-97ರಿಂದ ಕೊಡಲು ಒಪ್ಪಿದ್ದಾರೆ. ಇದು ಬಜೆಟ್‌ನಲ್ಲಿ ಕೂಡ ಆಗಿದೆ. ಈಗ ಅವರ ಒಪ್ಪಿಗೆ ಪತ್ರ ಬಂದಿದೆ. ಮುಂದೆ ಬರತಕ್ಕಂಥ ಸಚಿವ ಸಂಪುಟದ ಸಭೆಯಲ್ಲಿ ಇದ್ದು, 1-4-98ರಿಂದ ಜಿಲ್ಲಾ ಪಂಚಾಯಿತಿ ಸದಸ್ಯರಿಗೆ ಒಂದು ಸಾವಿರ ರೂಪಾಯಿ ಮತ್ತು ತಾಲ್ಲೂಕು ಪಂಚಾಯಿತಿಯ ಸದಸ್ಯರಿಗೆ 500 ರೂಪಾಯಿಗಳ ಮಾಸಿಕ ವೇತನವನ್ನು ಕೊಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲಾ): ಮಾನ್ಯ ಅಧ್ಯಕ್ಷರೆ, ಅವರು 1-5-95ರಿಂದ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಮಾನ್ಯ ಸಚಿವರು ಅಕ್ಟೋಬರ್ 1997ರಿಂದ ಕೊಡುತ್ತೇವೆ ಎಂದು ಹೇಳಿದ್ದರು. ಆದರೆ ಈಗ, ಈ ತಿಂಗಳಿನಿಂದ ಕೊಡುವುದಕ್ಕೆ ಅನುವು ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಈ ಸಂದರ್ಭದಲ್ಲಿ ನಮಗೆ ಅನ್ನಿಸುವುದು ಏನೆಂದರೆ, ನಿಜವಾಗಿ ಸರ್ಕಾರ ಅವರಿಗೆ ಗೌರವಧನವನ್ನು 1-5-95ರಿಂದಲೇ ಕೊಡಬೇಕು. ಏಕೆಂದರೆ ಸದಸ್ಯರು ಆ ರೀತಿ ಕೆಲಸ ಮಾಡಿದ್ದಾರೆ. ಅದು ಆಗಲಿಲ್ಲವೆಂದರೆ, ಕೊನೆಯ ಪಕ್ಷ ಸರ್ಕಾರ ಒಪ್ಪಿಕೊಂಡಂತೆ, ಮಾನ್ಯ ಸಚಿವರು ಒಪ್ಪಿಕೊಂಡಂತೆ 1-10-97ರಿಂದ ಆದರೂ ಕೊಡಬೇಕು. ಆ ರೀತಿ ಸರ್ಕಾರ ನಿರ್ಧಾರ ಮಾಡಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯ ಮಾಡಲು ಬಯಸುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೇ, ನಮಗೆ ಒಂದು ಅನುಮಾನವೆಂದರೆ ಇವರು ಬಜೆಟ್‌ನಲ್ಲಿ ಪ್ರೊವೈಡ್ ಮಾಡಿಕೊಳ್ಳುತ್ತಾರೆ, ಆದರೆ ಕೊಡುವುದಿಲ್ಲ. ಹೋದ ವರ್ಷದ ಬಜೆಟ್‌ನಲ್ಲಿ ಅಂಗವಿಕಲರ ವೇತನ ಮತ್ತು ವಿಧವಾ ವೇತನವನ್ನು 70 ರೂಪಾಯಿಯಿಂದ 100 ರೂಪಾಯಿ ಕೊಡುತ್ತೇವೆ ಎಂದು

ಹೇಳಿದ್ದರು. ಅದು ಇವತ್ತಿಗೂ ಯಾರಿಗೂ ಕೂಡ ತಲುಪಲಿಲ್ಲ. ಇದನ್ನೂ ಕೂಡ ಕಳೆದ ಎರಡು ವರ್ಷಗಳಿಂದ ಹೇಳಿಕೆ ಕೊಡುತ್ತಲೇ ಬಂದಿದ್ದೀರಿ. ಅವರು ಕಾಯುತ್ತಲೇ ಬಂದಿದ್ದಾರೆ. ಅವರು ** ಮತ್ತು ಬಂದಿರತಕ್ಕಂಥವರು. ಅವರನ್ನು ಈಗ ಯಾರೂ ಕೆಲಸಕ್ಕೆ ಕರೆಯುವುದಿಲ್ಲ. ಏಕೆಂದರೆ, ಇವರು ಜಿಲ್ಲಾ ಪಂಚಾಯಿತಿಯ ಸದಸ್ಯರು, ಇವರನ್ನು ನಮ್ಮ ಮನೆಗೆ ಕೂಲಿಗೆ ಕರೆದರೆ ಏನಾಗುತ್ತದೋ ಎಂದು ಅವರು ಕರೆಯುವುದಿಲ್ಲ. ಇವರಿಗೂ ಹೋಗಲು ಹಿಂಸೆ. ಇವರು ಗೌರವಧನ ಕೊಡುತ್ತೇವೆ ಎಂದರು, ಆದರೆ ಇನ್ನೂ ಕೊಟ್ಟಿಲ್ಲ.

ಶ್ರೀ ರುಕ್ಕಯ್ಯ ಪೂಜಾರಿ (ವಿಟ್ಲ): ತಮಗೆಲ್ಲಾ ಗೊತ್ತಿರುವ ಹಾಗೆ ಸಾಮಾನ್ಯವಾಗಿ ಬಡವರು ಅಲ್ಲಿ ಸದಸ್ಯರಾಗಿದ್ದಾರೆ. ಮೀಸಲಾತಿಯ ಕಾರಣದಿಂದ ಈಗ ಹೆಚ್ಚಾಗಿ ಬಡವರು ಪರಿಶಿಷ್ಟ ಜಾತಿ ಮತ್ತು ಪಂಗಡಗಳವರು ಸದಸ್ಯರಾಗಿದ್ದಾರೆ. ದಿನಕ್ಕೆ ಮೂರು ಹೊತ್ತು ಊಟ ಮಾಡಲು ಸಾಧ್ಯವಿಲ್ಲದವರೂ ಕೂಡ ಸದಸ್ಯರಾಗಿದ್ದಾರೆ. ಅವರ ಕ್ಷೇತ್ರದಲ್ಲಿ ಓಡಾಟ ಮಾಡಲು ಅವರಿಗೆ ದಿನಕ್ಕೆ 25 ರೂಪಾಯಿಗಳಾದರೂ ಬೇಕಾಗುತ್ತದೆ. ಆದರೆ ಇವತ್ತು ಅದನ್ನು ದುಡಿದು ಸಂಪಾದನೆ ಮಾಡಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಜ್ಞಾನೇಂದ್ರ ಅವರು ಹೇಳಿದ ಹಾಗೆ ಅಂಥ ಸದಸ್ಯರನ್ನು ಯಾರೂ ದುಡಿಮೆಗೆ ಕರೆಯುವುದಿಲ್ಲ. ಇವರಿಗೂ ಹೋಗಲು ಸಂಕೋಚ, ಅವರಿಗೆ ಕರೆಯಲು ಸಂಕೋಚ. ಆ ದೃಷ್ಟಿಯಿಂದ, ಇವರಿಗೆ ಕೊಡಬೇಕಾಗಿರುವ ಗೌರವಧನವನ್ನು 1-4-98ರಿಂದ ಅಲ್ಲ, ಅವರು ಯಾವಾಗಿನಿಂದ ಸದಸ್ಯರಾಗಿದ್ದಾರೆ ಆವತ್ತಿನಿಂದಲೂ ಕೊಡಲು ತಾವು ಕ್ರಮ ತೆಗೆದುಕೊಳ್ಳುವಿರಾ ಎಂದು ಕೇಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಭಾವನೆಗಳಂತೆ ನನ್ನ ಭಾವನೆಯೂ ಇದೆ. 1-10-97ರಿಂದ ಅಂದರೆ ಗಾಂಧಿ ಜಯಂತಿಯಿಂದ ಇವರಿಗೆ ಗೌರವಧನವನ್ನು ಕೊಡಿಸಬೇಕು ಎಂದು ನಾನು ನಿರ್ಧಾರ ಮಾಡಿದ್ದೆ. ಅದಕ್ಕಿಂತ ಮೊದಲನೆಯ ಅವಧಿ ಸೇವಾ ಕಲ್ಪನೆ, ಮತ್ತೊಂದು ಮಗದೊಂದು ಇದ್ದರೂ ಕೂಡ, ಆ ಸದಸ್ಯರು ದುರ್ಬಲ ಆರ್ಥಿಕ ಮತ್ತು ಸಾಮಾಜಿಕ ಸನ್ನಿವೇಶದಿಂದ ಬಂದಿರುವಂಥ ಹಿನ್ನೆಲೆಯನ್ನು ನೋಡಿ ಮತ್ತು ದುಬಾರಿಯಾಗುತ್ತಿರುವಂಥ ಜೀವನ ವೆಚ್ಚದ ಹಿನ್ನೆಲೆಯಲ್ಲಿ ಅವರಿಗೆ ಖಂಡಿತವಾಗಿ ಕೊಡಬೇಕಾದುದು ನಮ್ಮ ಕರ್ತವ್ಯವೆಂದು ತಿಳಿದು 1-10-97ರಿಂದ ಕೊಡಬೇಕೆಂದು ತೀರ್ಮಾನಿಸಿ, ನಮಗೆ ಕೊಟ್ಟಿರತಕ್ಕಂಥ ಬಜೆಟ್ಟಿನ ಒಳಗೇ ಇದನ್ನು ಕೊಡುತ್ತೇವೆ ಎಂದರೂ, ಕೆಲವು ಕಾರಣಗಳಿಂದ ಅದು ನಿಂತಿತ್ತು. ಈಗ 1-4-98ರಿಂದ ಕೊಡಲು ನಮ್ಮ ಹಣಕಾಸು ಇಲಾಖೆಯ ಒಪ್ಪಿಗೆ ದೊರೆತಿದೆ. ಅವರಿಗೆ 4-5 ತಿಂಗಳು ತೊಂದರೆಯಾಗಿದೆ. ಆದರೆ 1995ನೇ ಇಸವಿಯಿಂದ ಕೊಡಲು ಸಾಧ್ಯವಿಲ್ಲ. ಅದರ ಬಗ್ಗೆ ನಾವು ಯೋಚನೆ ಮಾಡಿಲ್ಲ. ಈಗಾಗಲೇ ಕಾಲ ಗತಿಸಿ

** ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ತೆಗೆದು ಹಾಕಲಾಗಿದೆ.

ಹೋಗಿದೆ. ಮುಂದೆ ಬರತಕ್ಕಂಥ ಸಚಿವ ಸಂಪುಟದ ಸಭೆಯಲ್ಲಿ ಈ ಪ್ರಸ್ತಾವನೆಯನ್ನು ಮಂಡಿಸಿ ಒಪ್ಪಿಗೆಯನ್ನು ಪಡೆದುಕೊಂಡು 1-4-98ರಿಂದ ಅವರಿಗೆ ಹಣ ಕೊಡುತ್ತೇವೆ.

ಅಧ್ಯಕ್ಷರು: ಜ್ಞಾನೇಂದ್ರ ಅವರು ಮತ್ತು ಇತರ ಸದಸ್ಯರು ಮಾತನಾಡುವ ಸಮಯದಲ್ಲಿ ಇರುವಂಥ ವಾಸ್ತವಾಂಶವನ್ನು ಹೇಳಿದ್ದಾರೆ. ಆದರೆ ನಾಳೆ ಅದು ಪತ್ರಿಕೆಗಳಲ್ಲಿ ಬಂದಾಗ, ಅವರೆಲ್ಲಾ ಬಡವರು ಎನ್ನುವುದೆಲ್ಲಾ ಬರುವುದು, ಆಗ ಅದರ ಮೇಲೆ ವ್ಯಾಖ್ಯಾನ ಆಗುವುದು ಚೆನ್ನಾಗಿ ಕಾಣುವುದಿಲ್ಲ. ಆದ್ದರಿಂದ, ಅವರಿಗೆ ಗೌರವಧನ ಕೊಡಬೇಕು ಎನ್ನುವುದು ಪ್ರಶ್ನೆ, ಅದಕ್ಕೆ ಸರ್ಕಾರದವರು ತಾತ್ವಿಕವಾಗಿ ಒಪ್ಪಿಗೆಯನ್ನು ಕೊಟ್ಟಿದ್ದಾರೆ, 1-4-98ರಿಂದ ಜಾರಿಗೆ ತರುತ್ತಾರೆ ಎನ್ನುವುದಷ್ಟನ್ನು ಮಾತ್ರ ಅಧಿಕೃತ ದಾಖಲೆಗೆ ತರೋಣ.

ಶ್ರೀ ಎಂ.ಪಿ.ಪ್ರಕಾಶ್: 1-10-97ರಿಂದ ಕೊಡಬೇಕು ಎನ್ನುವುದು ನನ್ನ ನಿರ್ಧಾರವಾಗಿತ್ತು. ಆದರೆ ಕೆಲವು ಹಣಕಾಸಿನ ಕಾರಣಗಳಿಂದ ಅದು ಆಗಲಿಲ್ಲ. 1-4-98ರಿಂದ ಕೊಡಲು ಹಣಕಾಸು ಇಲಾಖೆ ಸಹಮತಿಯನ್ನು ಕೊಟ್ಟಿದೆ.

ಅಧ್ಯಕ್ಷರು: ನನ್ನ ಅಭಿಪ್ರಾಯವೆಂದರೆ, ಜ್ಞಾನೇಂದ್ರ ಅವರು ಮತ್ತು ಇತರ ಸದಸ್ಯರು ಹೇಳಿದಂಥ ಕೆಲವು ಮಾತುಗಳು ಕಡತಕ್ಕೆ ಹೋಗಿವೆ. ಅವರು ಬಡವರು, ಅವರು ಇಂಥಿಂಥ ವರ್ಗಗಳಿಂದ ಬಂದಿದ್ದಾರೆ, ಅವರನ್ನು ಯಾರೂ ಕೂಲಿಗೆ ಕರೆಯುವುದಿಲ್ಲ ಎನ್ನುವುದೆಲ್ಲಾ ಪತ್ರಿಕೆಗಳಿಗೆ ಪ್ರಕಟಣೆಗೆ ಹೋದರೆ ಅದು ಸರಿಯಾಗುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ: ಸತ್ಯವಾದಂಥ ವಿಚಾರಗಳು ಅವು. ತಮಗೂ ಗೊತ್ತಿದೆ, ನಮಗೂ ಗೊತ್ತಿದೆ, ಎಲ್ಲರಿಗೂ ಗೊತ್ತಿದೆ. ಏಕೆ ಪ್ರಕಟವಾಗಬಾರದು?

ಅಧ್ಯಕ್ಷರು: ಜ್ಞಾನೇಂದ್ರ ಅವರೇ, ನಾನು ಹೇಳುವ ಮಾತನ್ನು ಅರ್ಥಮಾಡಿಕೊಳ್ಳಿ, ತಾವು ಹೇಳಿದ್ದು ನೂರಕ್ಕೆ ನೂರರಷ್ಟು ಸತ್ಯ. ಆದರೆ ಅದು ನಾಳೆ ಪತ್ರಿಕೆಗಳಲ್ಲಿ ಪ್ರಕಟವಾದರೆ ಕೆಲವರ ಮನಸ್ಸಿಗೆ ಗಾಯವಾಗುತ್ತದೆ. ಆದ್ದರಿಂದ, ಅವರಿಗೆ ಗೌರವಧನ ಕೊಡಬೇಕು ಎನ್ನತಕ್ಕಂಥ ವಿಚಾರ ಪ್ರಸ್ತಾಪವಾಯಿತು, ಅದಕ್ಕೆ ಸರ್ಕಾರ ಒಪ್ಪಿಕೊಂಡಿದೆ ಎನ್ನುವುದಕ್ಕೆ ಸೀಮಿತಗೊಳಿಸೋಣ. ಉಳಿದ ಯಾವುದೂ ಪ್ರಕಟಣೆಗೆ ಹೋಗುವುದು ಬೇಡ ಎಂದು ಹೇಳಿದೆ.

ಶ್ರೀ ವಿಶ್ವೇಶ್ವರ ಹೆಗಡೆ: 1-10-1997 ರಿಂದಾದರೂ ಕೊಡಿ.

ಶ್ರೀ ಎಂ.ಪಿ.ಪ್ರಕಾಶ್: ಅವರು ಕನಿಷ್ಟ ಒಂದು ತಿಂಗಳಲ್ಲಿ ಒಂದು ಬಾರಿಯಾದರೂ ಜಿಲ್ಲಾ ಕೇಂದ್ರಗಳಿಗೆ ಹೋಗಬೇಕಾಗಿರುವುದು ಮತ್ತು ಕ್ಷೇತ್ರದಲ್ಲಿ ತಿರುಗಾಡಬೇಕಾಗಿರುವುದರಿಂದ 1-4-98ರಿಂದ ಗೌರವಧನ ಮಾಸಿಕ ಒಂದು ಸಾವಿರ ರೂಪಾಯಿಯನ್ನು ಕೊಡಲು ತೀರ್ಮಾನ ಮಾಡಲಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ತಾವು ಅನುಮತಿ ಕೊಟ್ಟರೆ ಒಂದು ಮಾತನ್ನು ಹೇಳುತ್ತೇನೆ. ನಾವು ಅವರ ಯಾವುದೇ ವಿವರಗಳಿಗೆ ಹೋಗುವುದು ಬೇಡ. ಅವರ ಮನಸ್ಸಿಗೆ ನೋವಾಗುವುದೂ ಬೇಡ. ಆದರೆ ಇದು ವಾಸ್ತವಿಕ ಸಂಗತಿಯಲ್ಲವೇ? ಸಾಮಾನ್ಯ ಕುಟುಂಬದಿಂದ ಬಂದು ಜನ ಸೇವೆ ಮಾಡಲು ಹೊರಟಿರುವರಿಗೆ 1-4-98ರಿಂದ ಗೌರವಧನ ಕೊಡುತ್ತೇವೆ ಎಂದು ಹೇಳಿದರು. ನಾನು ಹೇಳುವುದು ಏನೆಂದರೆ ನಾವು ಬೇಕಾದಷ್ಟು ಖರ್ಚುಗಳನ್ನು ಮಾಡುತ್ತಿದ್ದೇವೆ. ಆ ರೀತಿ ಸೇವೆ ಮಾಡುವಂಥ ಒಂದು ಹೊಸ ವ್ಯವಸ್ಥೆಯನ್ನು ನಾವು ಮಾಡಿರಬೇಕಾದರೆ 1-10-97ರಿಂದ ಅದನ್ನು ಜಾರಿಗೆ ಕೊಡಿ. ಏತಕ್ಕೋಸ್ಕರ ಈ ಮೀನಮೇಷ ನೋಡುತ್ತಿದ್ದೀರಿ. ಅದನ್ನೇ ನೀವೇ ಒಪ್ಪಿಕೊಂಡು ಆಗಿದೆ, ಪತ್ರಿಕೆಗಳಲ್ಲಿ ಬಂದಾಯಿತು, ದೊಡ್ಡ ಸಭೆಗಳಲ್ಲೂ ಹೇಳಿಯಾಗಿದೆ. 1-10-97ರಿಂದ ಜಾರಿಗೆ ಕೊಡಿ. ಅದಕ್ಕೆ ಎಲ್ಲರ ಒಮ್ಮತ ಇದೆ. ಈ ಕಡೆ ಇರುವವರು ಅಥವಾ ಆ ಕಡೆ ಇರುವವರು ಯಾರೂ ಅದಕ್ಕೆ ವಿರೋಧ ಮಾಡುವುದಿಲ್ಲ.

ಅಧ್ಯಕ್ಷರು: ನಾನು ಹೇಳಿದ ವಿಷಯವನ್ನು ನೀವು ಯಾರೂ ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಅದು ಬೇಡ ಎಂದು ಹೇಳುತ್ತಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್: ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯಲ್ಲಿ ಕಷ್ಟದಲ್ಲಿರತಕ್ಕಂಥ ಸದಸ್ಯರಿಗೆ ಗೌರವಧನ ಕೊಡಬೇಕು ಎಂದು ಅವರು ಪ್ರಸ್ತಾಪ ಮಾಡಿದ್ದು ಸಮಾಪ್ತಿಗೊಳ್ಳುವುದಿಲ್ಲ. ಆದರೆ ಸದಭಿರುಚಿಯಿಂದ ಅದು ಬೇಡ ಎಂದು ತಾವು ಹೇಳುತ್ತಿದ್ದೀರಿ. ಆದ್ದರಿಂದ ಗೌರವಧನ ಎನ್ನುವಷ್ಟಕ್ಕೇ ಸೀಮಿತಗೊಳಿಸುವುದು ಒಳ್ಳೆಯದು.

ವಿಶ್ವೇಶ್ವರ ಹೆಗಡೆ: 1-10-97ರಿಂದ ಕೊಡಬೇಕು.

ಶ್ರೀ ರುಕ್ಮಯ್ಯ ಪೂಜಾರಿ: 1-10-97ರಿಂದ ಕೊಡುತ್ತೇವೆ ಎಂದು ವಿಧಾನ ಪರಿಷತ್ತಿನಲ್ಲಿ ಕೂಡ ಉತ್ತರ ಕೊಟ್ಟಿದ್ದಾರೆ.

ಶ್ರೀ ಕುಂಬ್ಳೆ ಸುಂದರರಾವ್: ಮೇಲ್ಮನೆಯಲ್ಲಿ ನೀವು ಒಪ್ಪಿಕೊಂಡಿದ್ದೀರಿ.

ಅಧ್ಯಕ್ಷರು: ಸರ್ಕಾರ ನಡೆಸುವವರಿಗೆ ಹಣಕಾಸಿನ ತೊಂದರೆ ಇರುತ್ತದೆ. ಮೇಲಿರುವ ಮ್ಮವರನ್ನು ಕೇಳಿ, ಎಷ್ಟು ಕಷ್ಟ ಇದೆ ಎನ್ನುವುದನ್ನು ಹೇಳುತ್ತಾರೆ.

ಶ್ರೀ ಎಂ.ಪಿ.ಪ್ರಕಾಶ್: 1-10-97ರಿಂದ ಕೊಡಬೇಕು ಎನ್ನುವುದು ಸಹಜವಾಗಿದ್ದರೂ ೂಡ ಹಣಕಾಸಿನ ಸಹಮತಿ ಸಿಕ್ಕಿರುವುದು 1-4-98ರಿಂದ ಕೊಡಲು. ಆದ್ದರಿಂದ -4-98ರಿಂದ ಕೊಡುತ್ತೇವೆ. ಮತ್ತು ಆ ವಿಚಾರವನ್ನು ಮತ್ತೆ ನಾನು ಪರಿಶೀಲಿಸುತ್ತೇನೆ.